## ಕಾಡಿಗೆ ಕಣ್ಣು

ಒಂದು ಸಂಜೆ ಸಫಾರಿ ಮುಗಿಸಿ ಗೌರಿ ಕೆರೆಯ ಹತ್ತಿರ ಬಂದಾಗ ಡಾ.ರಾಘವೇಂದ್ರ ಮತ್ತು ವಿನಯ ಮರದ ಮೇಲೊಂದು ಕರಿಯ ಆಕೃತಿಯನ್ನು ಕಂಡರು. ಕತ್ತಲು ಆವರಿಸುವಾಗ ಕಾಡಿನ ಅನೇಕ ಮರಗಳ ಮೇಲೆ ಗಟ್ಟಿ ನೆರಳಿನ ಇಂತಹ ಛಾಯೆಗಳು ಕಾಣುವುದು ಸಾಮಾನ್ಯ ಸಂಗತಿ. ಕೆಲವೊಮ್ಮೆ ಅರೆಗತ್ತಲಲ್ಲಿ ಕೂತ ನವಿಲು ಕೂಡ ಒಂದು ಸಣ್ಣ ಪ್ರಾಣಿ ಕೂತಿರುವಂತೆ ಭ್ರಮೆ ಹುಟ್ಟಿಸುತ್ತದೆ. 'ಏನೋ ಇರಬಹುದು ಬಿಡಿ. ಲೋ ಲೈಟ್ ಇರೋದ್ರಿಂದ ಕ್ಯಾಮೆರಾದಲ್ಲೂ ಅದರ ಚಿತ್ರ ಬರಲ್ಲ' ಎಂದು ಎಲ್ಲರೂ ನಿರಾಸಕ್ತಿ ತೋರಿಸಿದ್ದರು. ಆದರೆ ಕಡಿಮೆ ಬೆಳಕಲ್ಲೂ ಅಸ್ಪಷ್ಟ ಚಿತ್ರ ತೆಗೆಸಬಲ್ಲ ಪವರ್‌ಫುಲ್ ಲೆನ್ಸ್ ಹೊಂದಿದ್ದ ಡಾ.ರಾಘವೇಂದ್ರ 'ಇರಲಿ ನೋಡೇ ಬಿಡೋಣ' ಎಂದು ತಿಣುಕಾಡಿ ಒಂದು ಚಿತ್ರ ತೆಗೆದರು. ಆಗ ನೋಡಲಾಗಿ ಅದೃಷ್ಟಕ್ಕೆ ಮರದ ಮೇಲೆ ಮಲಗಿದ್ದ ಪ್ರಾಣಿ ಬ್ಲಾಕ್ ಲೆಪರ್ಡ್ ಎಂದು ಗೊತ್ತಾಯಿತು. ಅಲ್ಲೀತನಕ ಅರಣ್ಯ ಇಲಾಖೆಯವರು ಬ್ಲಾಕಿ ಇರಬಹುದು ಎಂದು ಹೇಳುತ್ತಿದ್ದರೇ ಹೊರತು ಖಚಿತಗೊಳಿಸಿರಲಿಲ್ಲ, ಭದ್ರಾ ಕಾಡಿನ ಮೂಲ ಕಪ್ಪು ಗಂಡು ಚಿರತೆಯನ್ನು ಪತ್ತೆ ಮಾಡಿ ಡಾಕ್ಟ್ರು ನಮ್ಮ ಹುಡುಕುವ ಚಟವನ್ನು ತೀವ್ರಗೊಳಿಸಿಬಿಟ್ಟರು. ಆದರೆ ಎಷ್ಟೇ ಹುಡುಕಿದರೂ ನಮ್ಮ ಹಣೇಬರೆಹಕ್ಕೆ ಅದು ಮತ್ತೆಂದೂ ಸಿಗಲೇ ಇಲ್ಲ.

ವನಪಾಲಕರಲ್ಲಿ ವಿಚಾರಿಸಿದರೆ 'ಅದು ಕುಂದೂರು ಕೆರೆ ಕಡೆ ಸೇರ್ಕಂಡೈತೆ. ಹಳ್ಳಿ ಸೈಡಿನ ನಾಯಿಗಳನ್ನು ಹಿಡ್ಕೊಂಡು ತಿಂತಾ ಹೊಸ ರುಚಿ ಕಂಡ್ಕೊಂಡಿದೆ. ಹಂಗಾಗಿ ಸಫಾರಿ ಝೋನಿನ ಕಡೆ ಬರ್ತಿಲ್ಲ. ಭಾಳಾ ನಾಚ್ಕೆ ಅದ್ಕೆ. ಹಗಲೊತ್ತು ಯಾರ ಕಣ್ಣಿಗೂ ಕಾಣದಂಗೆ ಇದ್ದು ಬಿಡುತ್ತೆ. ಏನಿದ್ರೂ ರಾತ್ರಿ ಹೊತ್ತೇ ಅದರ ಬ್ಯಾಟೆ ಡ್ಯೂಟಿ. ಕತ್ಲೆಗೂ, ಈ ಕರಿಯಂಗೂ ಹೇಳಿ ಮಾಡ್ಸದಂಗಾಗಿದೆ. ಸುತ್ತಲ ಹಳ್ಳೀಲೆ ಬೊಗೊಳೋಕೆ ಅಂತ ಒಂದು ನಾಯಿ ಕುನ್ನಿನೂ ಉಳಿಸದಂಗೆ ನುಂಗಿನೀರು ಕುಡಿದೈತೆ' ಎಂದು ಹೇಳುತ್ತಿದ್ದರು.

ನಾವೀಗ ನೋಡಿದ್ದು ಆ ಹಳೇ ಬ್ಲಾಕಿಯ ಮಗ. ವಯಸ್ಸು ವರ್ಷದ ಮೇಲೆ ಮೂರು ತಿಂಗಳು. ತಾಯಿ ಚಿರತೆಯ ಮೂವರು ಮಕ್ಕಳಲ್ಲಿ ಈ ಕರಿಯನೇ ಹಿರಿಯ. ಕೊನೆಯ ತಂಗಿ ನಾಚಿಕೆ ಸ್ವಭಾವದವಳು. ಅವಳೀಗಂತೂ ಕಾಣುತ್ತಲೇ ಇಲ್ಲ. ಈ ಬ್ಲಾಕಿಗೊಬ್ಬ ತಮ್ಮನಿದ್ದು ಅವನ ಜೊತೆಗೇ ಓಡಾಡಿಕೊಂಡಿದ್ದ. 'ಈಗ ತಾಯಿ ಇವನ ಬೇರೆ ಮಾಡ್ದಂಗೆ ಕಾಣುತ್ತೆ. ಆಕೆಯ ಜೊತೆ ಇರಕ್ಕೆ ಹೋದ್ರೆ ಬ್ಯಾಡ ಇಲ್ಲೇ ಇರು ಅಂತ ಉಪಾಯ ಮಾಡಿ ಇಲ್ಲೀತಂಕ ತಂದು ಬಿಟ್ಟು ಹೋಗ್ತಾಳೆ. ಈಗ ಇದು ತನ್ನ ಸ್ವತಂತ್ರ ಟೆರಟರಿ ಮಾಡ್ಕೊಳ್ಳೋ ಸಮಯ ಬಂದಿದೆ. ತಂಗಿ, ತಮ್ಮ, ಅಮ್ಮ ಎಲ್ಲರೂ ದೂರವಾಗಿರೋಂದ್ರಿಂದ ಭಾಳಾ ಕನ್‌ಫ್ಯೂಶನ್ನಲ್ಲಿ ಜೀವನ ಸಾಗಿಸ್ತಾ ಇದ್ದಾನೆ. ಮನೆಯಿಂದ ಹೊರಕ್ಹಾಗಿದ ನೋವಿರಬೇಕಲ್ಲ' ಎಂದು ಜೀಪ್ ಸಫಾರಿಯ ಡ್ರೈವರ್ ಮಂಜು ಹೇಳಿದ. ವಯಸ್ಸಿಗೆ ಬಂದ ಕೂಡಲೇ ತಾಯಿ ನಿರ್ದಾಕ್ಷಿಣ್ಯವಾಗಿ ಓಡಿಸುತ್ತಾಳೆ. ಮಗು ತಾಯಿ ಕಲಿಸಿದ ವಿದ್ಯೆಯ ಜೊತೆಗೆ ತಾನೂ ಕೂಡ ಶಿಕಾರಿಯ ಹೊಸ ಪಟ್ಟುಗಳನ್ನು ಕಲಿಯಬೇಕು., ಹೊಸ ಸಾಹಸ, ಹೊಸ ಸಂಚುಗಳ ಮಾಡಿ ನವಜೀವನ ರೂಪಿಸಿಕೊಳ್ಳಬೇಕು. ಈ ಪ್ರಯತ್ನದಲ್ಲಿ ಸಫಲತೆಯೂ ಉಂಟು, ಸಾವೂ ಉಂಟು.

ಬ್ಲಾಕಿ ಕಂಡ ಕೂಡಲೇ ನನಗೆ ಫೋನು ಹಚ್ಚುವ ಮಂಜು 'ಸರ್ ಎಲ್ಲಿದ್ದೀರಾ? ಬೇಗ ಬನ್ನಿ' ಎಂದು ಕರೆಯುವುದೇ ಬಾಕಿ ನಾನು ಹಾಜರು. ಆವತ್ತು ಮಧ್ಯಾಹ್ನಕ್ಕೆ ಫೋನು ಮಾಡಿದ ಮಂಜು 'ಬೇಗ ಬನ್ನಿ' ಎಂದ. ನನ್ನ ಬಳಿ ಹೆಚ್ಚು ಸಮಯವೇ ಇರಲಿಲ್ಲ. 'ನಾನು ಅಷ್ಟು ಬೇಗ ಅಲ್ಲಿಗೆ ತಲುಪೋದು ಕಷ್ಟ ಕಣೋ' ಎಂದೆ. 'ಹೇಗಾದರೂ ಬಂದು ಬಿಡಿ' ಎಂದು

